ಮೀನುಗಾರಿಕೆ ಅಭಿವೃದ್ಧಿ ನಿಗಮದ ಮಂಜೇನವಾಗಲೀ ಮೀನು ಮಾರಾಟ ಮಾಡಿದ್ದಲ್ಲಿ ಅಥವಾ ಅಲ್ಲಿಂದ ಡೀಸೆಲ್ ಖರೀದಿಸಿದ್ದಲ್ಲಿಲಾಗ ಪುಸ್ತಕ ಇಡುವುದು ಮತ್ತು ನಗದು ಬಿಲ್‌ಗಳನ್ನು ಹಾಜರು ಪಡಿಸುವ ಪರತ್ತುಗಳನ್ನು ಕೈಬಿಡಲಾಗಿತ್ತು. ಈ ವರ್ಷ ಕೂಡ ಇದೇ ರೀತಿ ಮುಂದುವರಿಸುವ ಯೋಚನೆ ಇದೆ. ಆದುದರಿಂದ, ಈ ವರ್ಷದಲ್ಲಿ ೭೦ ಲಕ್ಷದಷ್ಟು ಸಹಾಯಧನ ನೀಡುವ ಅಂದಾಜು ಇದೆ.

ಈ ಯೋಜನೆಯಿಂದ ಕರಾವಳಿಯ ಮೀನುಗಾರರ ಸಂಕಷ್ಟಗಳು ಪರಿಹಾರವಾಗುತ್ತವೆ ಎಂದು ನಾನು ಆಶಿಸುತ್ತೇನೆ.

iii) ರಾಜ್ಯದಾದ್ಯಂತ ದರೋಡೆಗಳು ಜಾಸ್ತಿಯಾಗಿರುವ ಬಗ್ಗೆ

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು),— ಮಾನ್ಯ ಅಧ್ಯಕ್ಷರೇ ಕರ್ನಾಟಕಾದ್ಯಂತ ದರೋಡೆ ಮತ್ತು ಗಲಭೆಗಳು ಜಾಸ್ತಿಯಾಗಿವೆ. ಕೋಲಾರ ನಗರದಲ್ಲಿ ಪಾಲಸಂದ್ರ ಲೇಔಟ್‌ನಲ್ಲಿ ಕೂಡ ಇಂತಹ ದರೋಡೆ ನಡೆದು ಅಲ್ಲಿನ ಮನೆಯಲ್ಲಿದ್ದವರಿಗೆ ಏಟುಗಳು ಬಿದ್ದು ಮನೆ ದೋಚಲ್ಪಟ್ಟಿತ್ತು. ಆದುದರಿಂದ ಮತ್ತೆ ದಿನವಿಡೀ ಈ ಗಲಭೆಗಳು ಜಾಸ್ತಿಯಾಗುತ್ತಿರುವುದರಿಂದ ಈ ಬಗ್ಗೆ ಮಾನ್ಯ ಗೃಹ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ.— ಈಗಾಗಲೇ ತಮಗೆಲ್ಲಾ ಗೊತ್ತಿರುವ ಹಾಗೆ ಆ ಗ್ಯಾಂಗ್‌ನವರು ಆಂಧ್ರಪ್ರದೇಶದಿಂದ ಬಂದವರು ಎಂದು ಗೊತ್ತಾಗಿದೆ. ಈ ಬಗ್ಗೆ ತನಿಖೆ ಮಾಡಲು ಅಧಿಕಾರಿಗಳನ್ನು ಕಳುಹಿಸಿದ್ದೇನೆ. ಮಾನ್ಯ ಸದಸ್ಯರು ಅತ್ಯಾಚಾರ ಮತ್ತು ದರೋಡೆಗಳು ಜಾಸ್ತಿಯಾಗುತ್ತಿವೆ ಎನ್ನುವ ಮಾತನ್ನು ಹೇಳಿಸಿದ್ದಾರೆ. ಬಹುಶಃ ಈಗ ಸ್ವಲ್ಪಮಟ್ಟಿಗೆ ಕಡಿವಾಣಾಗುತ್ತಿವೆ. ಸರ್ಕಾರ ಈ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಸಹ ತೆಗೆದುಕೊಂಡಿದೆ. ೧೯೮೪ನೇ ಇಸವಿಯಲ್ಲಿ ೨೨೧ ಡಕಾಯಿತಿಗಳು ನಡೆದಿದ್ದರೆ ಅದರಲ್ಲಿ ೮೪ ಕೇಸುಗಳು ಪತ್ತೆಯಾಗಿವೆ. ಅದೇ ರೀತಿಯಲ್ಲಿ ೧೯೮೫ನೇ ಇಸವಿಯಲ್ಲಿ ೧೫೪ ಡಕಾಯಿತಿಗಳು ನಡೆದಿದ್ದರೆ ೮೩ ಕೇಸುಗಳು ಪತ್ತೆಯಾಗಿವೆ. ಅದೇ ರೀತಿಯಲ್ಲಿ ೧೯೮೬ರಲ್ಲಿ ೨೨೨ ಡಕಾಯಿತಿಗಳು ನಡೆದಿದ್ದರೆ ೮೮ ಕೇಸುಗಳು ಪತ್ತೆಯಾಗಿವೆ. ಈ ವರ್ಷ ಕಳೆದ ಎರಡು ತಿಂಗಳಿಂದ ೨ ಡಕಾಯಿತಿಗಳು ನಡೆದಿದ್ದು ಎರಡೂ ಕೇಸುಗಳು ಪತ್ತೆಯಾಗಿವೆ. ನಾನು ಈ ಮಾತನ್ನು ಹೇಳಿದರೆ ಮಾನ್ಯ ಸದಸ್ಯರು, ಮಂತ್ರಿಗಳು ಮಾಮೂಲು ಉತ್ತರವನ್ನು ಹೇಳುತ್ತಾರೆಂದು ಹೇಳುತ್ತಾರೆ. ಪೋಲೀಸ್ ಇಲಾಖೆಯಲ್ಲಿ ಪೋಲೀಸ್ ಸಿಬ್ಬಂದಿ ಈಗಿನ ಜನಸಂಖ್ಯೆಗೆ ಅನುಗುಣವಾಗಿಲ್ಲ. ಪೋಲೀಸ್‌ನವರು ಬಹಳ ಕಡಿಮೆ ಜನ ಇದ್ದಾರೆ. ಒಬ್ಬ ಪೋಲೀಸಿನವರಿಗೆ ೧೬೨೪ ಜನ ಬರುತ್ತಾರೆ. ಪೋಲೀಸಿನವರಿಗೆ ಬೇಕಾದಂತಹ ಎಲ್ಲಾ ರೀತಿಯ ಮೊಬಿಲಿಟಿಯನ್ನು ಒದಗಿಸಿಕೊಟ್ಟು ರಾತ್ರಿ ವೇಳೆಯಲ್ಲಿ ಹೆಚ್ಚು ಹೆಚ್ಚು ಗಸ್ತು ಮಾಡಲು ಆದೇಶ ಕೊಟ್ಟಿದ್ದೇನೆ, ಕೋಲಾರದಲ್ಲಿ ನಡೆದಿರುವ ಘಟನೆ ಇಂಟರ್ ಸ್ಟೇಟ್‌ನವರಿಂದ ಮಾಡಿರುವುದರಿಂದ ಅಲ್ಲಿನ ಪೋಲೀಸ್‌ನವರ ಸಹಾಯ ಕೂಡ ಪಡೆಯಬೇಕಾಗುತ್ತದೆ. ಇಂಟರ್‌ಸ್ಟೇಟ್ ಪೋಲೀಸ್ ಅಧಿಕಾರಿಗಳ ಸಹಾಯ ಪಡೆದು ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

iv. ವಜಾ ಆಗಿರುವ ಜೂನಿಯರ್ ಕಾಲೇಜಿನ ೧೮೯ ಗುತ್ತಿಗೆ ಉಪನ್ಯಾಸಕ ಮರುನೇಮಕ ಮಾಡಲು ಮನವಿ

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ದಿನಾಂಕ ೪-೨-೮೭ ರಂದು ಸನ್ಮಾನ್ಯ ಶಿಕ್ಷಣ ಸಚಿವರು ಆಡಳಿತ ಮತ್ತು ವಿರೋಧ ಪಕ್ಷಗಳ ನಾಯಕರು ಹಾಗೂ ಅನೇಕ ಗೌರವಾನ್ವಿತ ಶಾಸಕರು ಪರಸ್ಪರ ಸಮಾಲೋಚಿಸಿ, ತಾವೆಲ್ಲರೂ ಕಬ್ಬನ್ ಪಾರ್ಕಿಗೆ ಹೋಗಿ ಸತ್ಯಾಗ್ರಹಿಗಳನ್ನು ಉದ್ದೇಶಿಸಿ ಮಾಡಿದ ಕಳಕಳಿಯ ಆದರಣೀಯ ಮನವಿಯ ಆಧಾರದ ಮೇಲೆ ಪುನರ್ ನೇಮಕ ಮಾಡಿಕೊಂಡು ಎಲ್ಲಾ ಗುತ್ತಿಗೆ ಶಿಕ್ಷಕರು ಮತ್ತು ಉಪನ್ಯಾಸಕರುಗಳಿಗೆ ನ್ಯಾಯ ದೊರಕಿಸಲು ಶೀಘ್ರದಲ್ಲಿಯೇ ಸಂಪುಟದಲ್ಲಿ ನಿರ್ಧಾರ ತೆಗೆದುಕೊಳ್ಳಲಾಗುವುದೆಂಬ'' ತಮ್ಮ ಆಶ್ವಾಸನೆಯ ಮೇರೆಗೆ ಆ ದಿನವೇ ಆಮರಣಾಂತ ಉಪವಾಸ ಸತ್ಯಾಗ್ರಹವನ್ನು ಅವರು ಹಿಂತೆಗೆದುಕೊಂಡರು.

ಶಿಕ್ಷಣ ಸಚಿವರು, ಅಧಿಕಾರರೂಢ ಹಾಗೂ ಇಡೀ ವಿರೋಧ ಪಕ್ಷಗಳ ಎರಡೂ ಸದನಗಳ ಸದಸ್ಯರ ಬೆಂಬಲ ಅವರಿಗೆ ಇರುವುದರಿಂದ ಅವರು ಶೀಘ್ರದಲ್ಲಿಯೇ ನ್ಯಾಯ ಸಿಗುತ್ತದೆ ಎಂದು ಭಾವಿಸಿದ್ದರು. ಆದರೆ ಅವರು ಅಮರಣಾಂತ ಉಪವಾಸ ಸತ್ಯಾಗ್ರಹ ಮುಕ್ತಾಯವಾಗಿ ಒಂದು ತಿಂಗಳಾಗುತ್ತಾ ಬಂದರೂ ಸರ್ಕಾರದ ಆಶ್ವಾಸನೆ ಕಾರ್ಯರೂಪಕ್ಕೆ ಬಂದಿಲ್ಲ. ದಿನಾಂಕ ೨೪-೨-೮೭ ರಂದು ಜರುಗಿದ ಸಂಪುಟದ ಸಭೆಯಲ್ಲೂ ಸಹ ಅವರ ಬೇಡಿಕೆಗಳ ಬಗ್ಗೆ ಸರ್ಕಾರದ ಅಧಿಕೃತ ನಿರ್ಧಾರ ಪ್ರಕಟವಾಗಿಲ್ಲ.

ವಜಾ ಆದ ಉಪನ್ಯಾಸಕರ ಸ್ಥಿತಿ ತೀರಾ ಶೋಚನೀಯವಾಗಿದೆ. ಅವರಲ್ಲಿ ಎಷ್ಟೋ ಜನರು ಗರಿಷ್ಠ ವಯೋಮಿತಿ (ಏಜ್ ಬಾರ್) ವಿೂರಿ ಮತ್ತೆ ಸರ್ಕಾರಿ ನೌಕರಿಗೆ ಸೇರುವ ಅರ್ಹತೆಯನ್ನೇ ಕಳೆದುಕೊಂಡಿದ್ದಾರೆ. ಅವರನ್ನು ಅವಲಂಬಿಸಿದ ಅನೇಕ ಕುಟುಂಬಗಳು ಅವರತಂದೆ ತಾಯಿಗಳು ಹೆಂಡತಿ ಮಕ್ಕಳು ಹಸಿವಿನ ಸಂಕಟಕ್ಕೆ ಸಿಲುಕಿದ್ದಾರೆ. ಹೀಗಾಗಿ ವಜಾ ಆದವರು ಮಾನಸಿಕ ಸಮತೋಲನ ಕಳೆದುಕೊಂಡು ಹುಚ್ಚರಾಗುವ ಹಂತಕ್ಕೆ ತಲುಪಿದ್ದಾರೆ.

ಸರ್ಕಾರಿ ಜೂನಿಯರ್ ಕಾಲೇಜುಗಳಲ್ಲಿ ಬಹಳಷ್ಟು ಹುದ್ದೆಗಳು ಖಾಲಿಯಾಗಿಯೇ ಉಳಿದಿದ್ದು ವಜಾ ಆದವರನ್ನು ಆ ಹುದ್ದೆಗಳಿಗೆ ತುಂಬಲು ಯಾವುದೇ ತೊಂದರೆ ಇಲ್ಲ. ಈಗ ಕಾಲೇಜುಗಳಲ್ಲಿ ಖಾಲಿ ಇರುವ ಹೈಸ್ಕೂಲು ಶಿಕ್ಷಕರಿಗೆ ಉಪನ್ಯಾಸಕರೆಂದು ಭಡ್ತಿ ಕೊಟ್ಟು ತುಂಬುದು ಸರಿಯಲ್ಲ.

ಪ್ರಥಮದರ್ಜೆ ಕಾಲೇಜುಗಳಲ್ಲಿಯೂ ಅನೇಕ ಹುದ್ದೆಗಳು ಖಾಲಿ ಉಳಿದಿವೆ. ಕಾರಣ ಎಷ್ಟೊಂದು ಜನರಿಗೆ ಸಾಧ್ಯವೋ, ಅಷ್ಟೊಂದು ಜನರಿಗೆ ಜೂನಿಯರ್ ಕಾಲೇಜು ಮತ್ತು ಪ್ರಥಮದರ್ಜೆ ಕಾಲೇಜುಗಳಲ್ಲಿ ನೇಮಕ ಮಾಡಿಕೊಂಡು ಉಳಿದವರನ್ನು ಹೈಸ್ಕೂಲುಗಳಲ್ಲಿ ಉಪನ್ಯಾಸಕರ ವೇತನ ಶ್ರೇಣಿ ಕೊಟ್ಟು ನೇಮಕ ಮಾಡಬೇಕು.

ದಿನಾಂಕ ೧೧-೧೧-೮೬ ರಂದು ರಾಜ್ಯದ ಅಡ್ವೋಕೇಟ್ ಜನರಲ್ಲರು ಮಾಡಿದ ಸೂಚನೆಗಳ ಆಧಾರದ ಮೇಲೆ ಮಾಡಿಕೊಳ್ಳಲಾಗಿರುವ ''ಸುಪ್ರೀಂ ಕೋರ್ಟಿನ ಒಪ್ಪಂದ'' ಗುತ್ತಿಗೆ ಉಪನ್ಯಾಸಕರನ್ನು ಖಾಯಂ ಮಾಡುವ ಸರ್ಕಾರದ ನಿರ್ಧಾರಕ್ಕೆ ಅಡ್ಡಿಯಾಗುವುದಿಲ್ಲ. ಈ ಒಪ್ಪಂದ ಕೇವಲ ತಾತ್ಕಾಲಿಕ ಮತ್ತು ಮಧ್ಯಂತರ ಅವಧಿಗೆ ಮಾತ್ರ ಸೀಮಿತವಾಗಿರುವುದರಿಂದ ಆ ಒಪ್ಪಂದವನ್ನು ವಾಪಸು ಪಡೆಯಲು ಇಲ್ಲವೇ ರದ್ದು ಪಡಿಸಲು ಸರ್ಕಾರಕ್ಕೆ ಪರಿಪೂರ್ಣ ಅಧಿಕಾರವಿದೆ. ಕಾರಣ ಗುತ್ತಿಗೆ ಉಪನ್ಯಾಸಕರ ಸೇವೆಯನ್ನು ಖಾಯಂ ಮಾಡಿದರೆ ಕಂಟೆಪ್ಟ್ ಆಫ್ ಕೋರ್ಟ್ ಆಗುವುದಿಲ್ಲ. ಅವರ ಬೇಡಿಕೆಗಳನ್ನು ಈಡೇರಿಸುವಲ್ಲಿ ವಿಳಂಬವಾದರೆ ವಾರ್ಷಿಕ ಪರೀಕ್ಷೆಗಳು ಆರಂಭವಾಗುವ ಈ ಹಂತದಲ್ಲಿ ವಿದ್ಯಾರ್ಥಿಗಳ ಪಾಠ ಪ್ರವಚನ ಪರೀಕ್ಷೆಗಳ ಮೇಲೆ ದುಷ್ಪರಿಣಾಮ ಉಂಟಾಗುವ ಸಾಧ್ಯತೆ ಇದೆ.

ಕಾರಣ ಸರಕಾರ ಈಗಲಾದರೂ ಶೀಘ್ರದಲ್ಲಿಯೇ ಸಂಪುಟದಲ್ಲಿ ತೀರ್ಮಾನ ಕೈಗೊಂಡು ವಜಾ ಆದ ಉಪನ್ಯಾಸಕರನ್ನು ಪುನರ್ ನೇಮಕ ಮಾಡಿಕೊಂಡು ಹಾಗೂ ಏಲ್ಲಾ ಗುತ್ತಿಗೆ ಶಿಕ್ಷಕರು ಮತ್ತು ಉಪನ್ಯಾಸಕರುಗಳನ್ನು ಸೇವೆಯಲ್ಲಿ ಖಾಯಂಗೊಳಿಸುವಂತೆ ತಾವುಗಳು ಶೀಘ್ರವೇ ತುರ್ತು ಕ್ರಮ ಕೈಗೊಳ್ಳಬೇಕೆಂದು ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—ಮಾನ್ಯ ಉಪಾಧ್ಯಕ್ಷರೇ, ಇದರ ಬಗ್ಗೆ ಈ ಸಭೆಯಲ್ಲಿ ಚರ್ಚೆ ಆಗಿದ್ದು, ಅವತ್ತಿನದಿವಸ ಮಾನ್ಯ ಅಧ್ಯಕ್ಷರ ಸಲಹೆ ಪ್ರಕಾರ ನಾನು ವಿರೋಧ ಪಕ್ಷದ ನಾಯಕರು ಮತ್ತು ವಿರೋಧ ಪಕ್ಷದ ಇತರ ಸದಸ್ಯರನ್ನು ಕರೆದು ನನ್ನ ಕೊಠಡಿಯಲ್ಲಿ ಚರ್ಚೆ ಮಾಡಿದ್ದಾಯಿತು. ಇವರನ್ನು ಸುಪ್ರೀಂ ಕೋರ್ಟ್ ಆದೇಶದ ಮೇಲೆ ಕೆಲಸದಿಂದ ತೆಗೆದಿದ್ದು, ಮತ್ತೆ ತೆಗೆದುಕೊಳ್ಳಬೇಕೆನ್ನುವ ಪ್ರಶ್ನೆ ಕಾನೂನು ಮತ್ತು ನಿಯಮಾವಳಿಗಳ ಪ್ರಕಾರ ಕಷ್ಟವಾಗುತ್ತದೆ. ಆ ದಿವಸ ಈ ಕಡೆಯ ಹಾಗೂ ಆ ಕಡೆಯ ಮಾನ್ಯ ಸದಸ್ಯರುಗಳು ಎಲ್ಲರೂ ಇವರಿಗೆ ಮಾನ್ಯವೀಯ ದೃಷ್ಟಿಯಿಂದ ಸಹಾಯ ಮಾಡಿ ಎಂದು ಹೇಳಿದರು. ಆದೇ ರೀತಿಯಲ್ಲಿ ನಾನು ಇದನ್ನು ಸಂಪುಟದ ಮುಂದೆ ತರುತ್ತೇನೆ, ಸಂಪುಟ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತದೆ ಎಂದು ಆಶ್ವಾಸನೆಯನ್ನೂ ಕೊಟ್ಟಿದ್ದೆ. ಸಂಪುಟದ ಮುಂದೆ ಈ ವಿಷಯವನ್ನು ತಂದಿದ್ದೆ, ಈಗ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಇವರನ್ನು ಜೂನಿಯರ್ ಕಾಲೇಜುಗಳಿಗೇ ಮತ್ತೆ ತೆಗೆದುಕೊಳ್ಳುವುದಕ್ಕೆ ಸಾಧ್ಯ ಇಲ್ಲ, ಹೈಸ್ಕೂಲುಗಳಲ್ಲಿ ಇವರನ್ನು ಅಬ್ಸಾರ್ಬ್ ಮಾಡುವುದಕ್ಕೆ ತೀರ್ಮಾನ ತೆಗೆದುಕೊಂಡಿದ್ದೇವೆ. ಅವರೂ ಸಹ ಒಪ್ಪಿದ್ದೇವೆಂದು ಹೇಳಿದ್ದಾರೆ. ಎಲ್ಲಾದರೂ ಕೊಡಿ ಕೆಲಸ ಕೊಟ್ಟರೆ ಸಾಕು ಎಂದು ಹೇಳಿದ್ದಾರೆ.

ಬಹುತೇಕವಾಗಿ ಸಂಪುಟದ ತೀರ್ಮಾನವಾಗಿದೆ. ಅದಷ್ಟು ಜಾಗ್ರತೆಯಾಗಿ ಇವರನ್ನು ಕೆಲಸಕ್ಕೆ ತೆಗೆದು ಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

(V) ನಿರುದ್ಯೋಗಿ ಪಶುವೀಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವುದು

ಶ್ರೀ ಬಾಬುರೆಡ್ಡಿ ವೆಂಕಪ್ಪ ತುಂಗಳ್ (ಬೀಳಗಿ).—ಮಾನ್ಯ ಅಧ್ಯಕ್ಷರೇ, ೧೯೮೩ನೇ ನವೆಂಬರ್ ತಿಂಗಳಲ್ಲಿ ಒಂದು ವರ್ಷದ ಅವಧಿಯ ಪಶುವೀಕ್ಷಕರ ತರಬೇತಿಯನ್ನು ಪೂರ್ಣಗೊಳಿಸಿ ಜೂನ್ ೧೯೮೪ರಲ್ಲಿ ಈ ರೀತಿ ತರಬೇತಿ ಪಡೆದವರ ಸಂದರ್ಶನ ನಡೆದು ಉಳಿದವರನ್ನೆಲ್ಲಾ ಅದೇ ವರ್ಷದ ಆಗಸ್ಟ್ ತಿಂಗಳಲ್ಲಿ ಪಶುವೀಕ್ಷಕರ ಹುದ್ದೆಗೆ ಆಯ್ಕೆ ಮಾಡಲಾಯಿತು.

ಹಲವಾರು ಜನರು ತರಬೇತಿ ಪಡೆದು ಆಯ್ಕೆಗಾಗಿ ಅರ್ಹರಿದ್ದರೂ ಮತ್ತು ಇಲಾಖೆಯಲ್ಲಿ ಅನೇಕ ಹುದ್ದೆಗಳು ಖಾಲಿ ಇದ್ದರೂ ಅವರು ಆಯ್ಕೆಯಾಗಿಲ್ಲ. ಈ ಜನರ ಆಯ್ಕೆಯ ಬಗ್ಗೆ ಸರಕಾರ ಈವರೆಗೆ ಯಾವುದೇ ಸೂಚನೆ ಅಥವಾ ಆದೇಶವನ್ನು ನೀಡಿಲ್ಲದಿರುವುದು ದುರ್ದೈವದ ಸಂಗತಿ.

ತರಬೇತಿ ಮುಗಿದು ಒಂದೂವರೆ ವರ್ಷ ಕಳೆದಿದ್ದರೂ ತರಬೇತಿ ಪಡೆದವರು ನಿರುದ್ಯೋಗಿಗಳಾಗಿ ಕಾಲ ಕಳೆಯುವುದು ಇಂದಿನ ದಿನಗಳಲ್ಲಿ ಬಹಳ ಕಷ್ಟ ಎಂಬುದು ತಮಗೂ ಗೊತ್ತು. ಕಾರಣ ಅವರ ತೊಂದರೆಗಳನ್ನು ಗಮನಿಸಿ ತರಬೇತಿ ಪಡೆದ ಪಶುವೀಕ್ಷಕರಿಗೆ ನೇಮಕಾತಿ ಆಜ್ಞೆಗಳನ್ನು ಈ ಕೂಡಲೇ ಮಾಡಬೇಕೆಂದು ನಾನು ತಮ್ಮ ಮೂಲಕ ಸನ್ಮಾನ್ಯ ಪಶುಸಂಗೋಪನಾ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಪಶುಸಂಗೋಪನೆ, ವಿಜ್ಞಾನಿಗಾರಿಕೆ ಮತ್ತು ರೇಷ್ಮೆ ಖಾತೆಯ ಸಚಿವರು).—ಮಾನ್ಯ ಅಧ್ಯಕ್ಷರೇ ತಮ್ಮ ಅನುಮತಿಯನ್ನು ಪಡೆದು ಈ ಕೆಳಕಂಡ ಹೇಳಿಕೆಯನ್ನು ನೀಡುತ್ತೇನೆ.

೧೯೮೩ರ ನವಂಬರ್ ತಿಂಗಳಲ್ಲಿ ಒಂದು ವರ್ಷದ ಪಶು ಪರೀಕ್ಷಕರ ತರಬೇತಿ ಪೂರ್ತಿಗೊಳಿಸಿದ ಅಭ್ಯರ್ಥಿಗಳ ಪೈಕಿ ಇಲಾಖಾ ನೇಮಕಾತಿ ಸಮಿತಿಯು ೩೬೫ ಅಭ್ಯರ್ಥಿಗಳನ್ನು ಪಶು ಪರೀಕ್ಷಕರ ಹುದ್ದೆಗಳಿಗೆ ಆಯ್ಕೆ ಮಾಡಿತ್ತು. ಈ ರೀತಿ ಆಯ್ಕೆ ಮಾಡಲಾದ ೩೬೫ ಅಭ್ಯರ್ಥಿಗಳ ಪೈಕಿ ಒಟ್ಟು ೩೨೨ ಅಭ್ಯರ್ಥಿಗಳನ್ನು ದಿನಾಂಕ ೧೦-೭-೮೬ರಂದು ಮತ್ತು ೨೨-೮-೮೬ರಂದು ಖಾಲಿ ಇದ್ದ ಹುದ್ದೆಗಳಿಗೆ ನೇಮಿಸಿಕೊಳ್ಳಲಾಯಿತು. ಸಧ್ಯದಲ್ಲಿ ಇಲಾಖೆಯಲ್ಲಿ ಕೇವಲ ೧೬ ಸದರಿ ಹುದ್ದೆಗಳು ಮಾತ್ರ ಖಾಲಿ ಇದ್ದು ಇಲಾಖೆಯು ಕೆಲವು ಯೋಜನೇತರ ಕಾರ್ಯಕ್ರಮಗಳನ್ನು ಕೈಬಿಡುವುದರಿಂದ ಆ ಸಿಬ್ಬಂದಿಯಂ ವರನ್ನು ಈ ಖಾಲಿ ಹುದ್ದೆಗಳಿಗೆ ವರ್ಗಾಯಿಸಲು ವಿಂಗಡಿಸಲಾಗಿದೆ.

ಉಪಾಧ್ಯಕ್ಷರು.—ಈಗ ಶೂನ್ಯವೇಳೆಯ ನಿಯಮದ ಮೇಲೆ ವಿಷಯ ಮುಕ್ತಾಯವಾಯಿತು. ಈಗ ಆಯುಷ್ಯದ ಮೇಲೆ ಚರ್ಚೆ. ಶ್ರೀಮತಿ ನಾಗರತ್ನಮ್ಮನವರು ಪ್ರಾರಂಭ ಮಾಡಬೇಕು.

೧೯೮೭-೮೮ರ ಆಯುವ್ಯಯದ ಮೇಲಿನ ಚರ್ಚೆ

ವಿತ್ತೀಯೇತರ ಕಾರ್ಯಕಲಾಪಗಳು

† ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಉಪಾಧ್ಯಕ್ಷರೇ, ನಮ್ಮ ಮುಖ್ಯಮಂತ್ರಿಗಳು ಮತ್ತು ಫೈನಾನ್ಸ್ ಮಿನಿಸ್ಟರ್ ಆದ ಶ್ರೀ ರಾಮಕೃಷ್ಣ ಹೆಗಡೆಯವರು ೧೯೮೭-೮೮ನೇ ಸಾಲಿನ ಈ ಬಜೆಟ್ ಇಟ್ಟಾಗ ಅವರು ಒಂದು ವಾಕ್ಯವನ್ನು ಹೇಳಿದ್ದಾರೆ. ''ತಾವು ಈ ಪಂಚಾಯತ್ ರಾಜ್ಯ ಮೆಂಬರ್ಸ್‌ಗಳನ್ನೆಲ್ಲಾ ನೋಡಿದೆವು, ಅವರನ್ನು ನೋಡಿ ಬಹಳ ಸಂತೋಷವಾಯಿತು. ಅವರ ಕಣ್ಣಲ್ಲಿ ಮೆರಗು ಮಿಂಚುತ್ತಿತ್ತು, ಅವರನ್ನು ನೋಡಿದ ತಕ್ಷಣ ನನಗೆ ಬಹಳ ಉಲ್ಲಾಸವಾಯಿತು'' ಹಾಗೆ ನಾನಾ ತರವಾಗಿ ವಿವರಿಸಿಕೊಂಡಿದ್ದಾರೆ. ಆ ಜನಗಳನ್ನು ನೋಡುವಂಥ ಭಾಗ್ಯ ನನಗೂ ಬಂದಿತ್ತು. ಆ ಜನಗಳನ್ನು ಎಂದರೆ, ಆ ಎಲೆಕ್ಟೆಡ್ ರೆಪ್ರೆಸೆಂಟೇಟಿವ್ಸ್‌ಗಳನ್ನು ನೋಡಿದಾಗ ನನಗೆ ಹೇಗಾಯಿತು ಎಂದರೆ, ಅವರ ಕಣ್ಣಲ್ಲಿ ಯಾವ ತರದ ಕಾಂತಿಯೂ ಇರಲಿಲ್ಲ. ಅವರ ಕಣ್ಣಲ್ಲಿ ಬರೀ ಸುಸ್ತು ಕಾಣು